**ಸಾಮಾನ್ಯವಾಗಿ ಕಾಡಿನಲ್ಲಿ ಹೆಚ್ಚು ಒಂಟಿಯಾಗಿ ಓಡಾಡುವ ತಾಕತ್ತಿರುವ ಪ್ರಾಣಿ ಎಂದರೆ ಅದು ಹುಲಿ ಮಾತ್ರ. ಅದು ಹಿಂಡಿನಲ್ಲಿ ವಾಸಿಸುವುದು ಕಡಿಮೆ. ಪ್ರಣಯದ ಗೆಳೆಯನ ಜೊತೆ ಮಿಲನವಾಗುವಾಗ, ಇಲ್ಲವೇ ಮಕ್ಕಳ ಜೊತೆ ಶಿಕಾರಿ ಮಾಡುತ್ತಾ ತಾಯ್ತನದ ಪೋಷಣೆ ಮಾಡುವಾಗ ಹೆಣ್ಣು ಹುಲಿಗಳು ಗುಂಪಿನಲ್ಲಿ ಗೋಚರಿಸುತ್ತವೆ.**

## ಬಮೇರಾ: ಮಧ್ಯಪ್ರದೇಶದ ಬಾಂಧವಗಢದ ದೈತ್ಯ ಗಂಡು ಹುಲಿ

ಕಾಡಿನ ಸಮೀಪದಲ್ಲಿ ಜನ ವಾಸಿಸುವ ಪ್ರದೇಶದ ದನಕರುಗಳನ್ನು ಎತ್ತಿ ಒಯ್ಯುವಲ್ಲಿ ಬಮೇರಾ ಕುಖ್ಯಾತಿ ಗಳಿಸಿದ್ದ. ಬೃಹತ್ ಅಣೆಕಟ್ಟು ಮತ್ತು ಹಸುರು ಭೂದೃಶ್ಯವನ್ನು ಹೊಂದಿರುವ ಪಂಪಾಥಾ ಎಂಬ ಪ್ರದೇಶದಲ್ಲಿ ನೆಲೆಗೊಂಡಿದ್ದ ಬಮೇರಾ ಸುಂದರ ಹುಲಿ ಎಂದೇ ಪ್ರಸಿದ್ಧ.

ಬಾಂಧವಗಢದ ಆಧಿಪತ್ಯವನ್ನು ಸಾಧಿಸಿದ್ದ ಬಮೇರಾ ತನ್ನ ವಯಸ್ಸಾದ ತಂದೆಯನ್ನೇ ಹೊಡೆದು ಉರುಳಿಸಿದವನು. ಬಾಂಧವಗಢದ ಚರಿತ್ರೆಯಲ್ಲೇ ಅತಿದೊಡ್ಡ ಹುಲಿ ಎಂದು ಜನಪ್ರಿಯಗೊಂಡ ಬಮೇರಾನ ಮೇಲೆ ಉದ್ಯಾನವನದ ಚಾಲಕರು ಮತ್ತು ಮಾರ್ಗದರ್ಶಕರು ಅನೇಕ ರಂಜಿತ ದಂತಕಥೆಗಳನ್ನು ಕಟ್ಟಿ ಪ್ರವಾಸಿಗರ ಕಲ್ಪನೆಗಳನ್ನು ಕೆರಳಿಸಿದರು.

ಝೋಬಿ ಎಂಬ ಹುಲಿಯ ಜೊತೆ ಕಾದಾಡಿ ಅದರ ಕಣ್ಣನ್ನು ಕಿತ್ತು ಹಾಕಿದ ಬಮೇರಾ ಆ ಕಾರಣದಿಂದ ಕುಖ್ಯಾತನೂ ಆಗಿದ್ದ. 2016ರಲ್ಲಿ ತೀರಿಕೊಂಡ.

## ಕರ್ನಾಟಕದ ಕಬಿನಿ ಹಿನ್ನೀರಿನ ರಾಣಿ

ಕರುನಾಡಿನ 'ಬ್ಯಾಕ್‌ವಾಟರ್ ಫೀಮೇಲ್' ಎಂಬ ಹೆಣ್ಣು ಹುಲಿಯನ್ನು 'ದಿ ಸ್ಟಾರ್ ಆಫ್ ಕಬಿನಿ' ಎಂದೂ ಕರೆಯುತ್ತಾರೆ. ಈ ಹಿನ್ನೀರಿನ ಹೆಣ್ಣು ಸುಂದರಾಂಗಿ. ಅವಳ ಓಡಾಟದ ಪ್ರದೇಶ ಕಾಕನಕೋಟೆ ಮತ್ತು ನಾಗರಹೊಳೆಯ ಕಬಿನಿಯ ಹಿನ್ನೀರಿನ ತನಕ. ಸರ್ವೇಸಾಧಾರಣವಾಗಿ ಹುಲಿಗಳು ತಮ್ಮ ಗಡಿಯನ್ನು ಐದು ಕಿಲೋ ಮೀಟರ್‌ಗಳಷ್ಟು ಮಾತ್ರ ಇರಿಸಿಕೊಳ್ಳುವುದು ಅವುಗಳ ಗುಣಧರ್ಮ. ಆದರೆ ಈ ಹಿನ್ನೀರ ಮಾನಿನಿ ಹಾಗಲ್ಲ. ತನ್ನ ಸಂಚಾರ ವ್ಯಾಪ್ತಿಯನ್ನು ಬಳ್ಳೆ ಡೆಂಪಲ್‌ನಿಂದ ಆರಂಭಿಸಿ ಮಗ್ಗೆ ರಸ್ತೆ ತನಕ ವಿಸ್ತರಿಸಿ, ಕೊನೆಗೆ ಬರ್ಬೆಳ್ಳೆ ಎಂಬ ಜಾಗದ ತನಕ ಬೇಲಿ ಹಾಕಿಕೊಂಡಿದ್ದಾಳೆ. ಇಷ್ಟು ಜಾಗದಲ್ಲಿ ಯಾರೂ ಈಕೆಯ ಅನುಮತಿ ಇಲ್ಲದೆ ಪ್ರವೇಶಿಸುವಂತಿಲ್ಲ. ತಿಳಿದವರು ಹೇಳುವ ಪ್ರಕಾರ, ಹುಲಿ ಇಷ್ಟು ದೊಡ್ಡ ಓಡಾಟದ ಕಾರ್ಯಕ್ಷೇತ್ರ ರೂಪಿಸಿಕೊಳ್ಳುವುದು ತುಂಬಾ ವಿರಳ.

ಈ ಪ್ರದೇಶದಲ್ಲಿ ತಿರುಗಾಡುತ್ತಿದ್ದ ಬೃಹತ್ ಗಾತ್ರದ ಹುಲಿರಾಯ ಮಾಸ್ತಿಗುಡಿ ಎಂಬಾತ ಮೊದಲು ಇವಳ ಮೇಲೆ ಮೋಹಗೊಂಡ. ಸಂಸರ್ಗವಾಗಿ ಆತನಿಂದ ಮಕ್ಕಳನ್ನು ಪಡೆದಳು. ನಂತರದ ದಿನಗಳಲ್ಲಿ ಎರಡನೇ ಪತಿಯಾಗಿ ಟೈಗರ್ ಟ್ಯಾಂಕ್ ಗಂಡು ಹುಲಿ ಬಂದ ಎಂದು ತರಕ್ಷು ಪ್ರಿಯರು ಹೇಳುತ್ತಾರೆ. ಹುಲಿಗಳ ವಿಷಯದಲ್ಲಿ ಹೀಗೆ ಗಂಡ ಯಾರು? ಹೆಂಡತಿ ಯಾರು? ಎಂದು ಹುಡುಕುವುದು ಶುದ್ಧ ಮೂರ್ಖತನ. ಈಕೆ ಸಖತ್ ಧೈರ್ಯಶಾಲಿ. ಸಫಾರಿ ವಾಹನ ಕಂಡರೆ ಭಯವಿಲ್ಲದಂತೆ ತಿರುಗುವವಳು. ಇಲ್ಲೀ ತನಕ ಮೂರು ಸುತ್ತು ಗರ್ಭ ಧರಿಸಿದ್ದಾಳೆ.

ಇಲ್ಲಿ ಸೋಜಿಗವಿರುವುದು ಇವಳ ಮಗ ಬೂಮ್ರಾಂಗ್‌ನ ಕಥೆಯಲ್ಲಿ. ಹುಲಿಯ ಗಂಡು ಮಕ್ಕಳು ಪ್ರೌಢಾವಸ್ಥೆಗೆ ಬಂದ ತಕ್ಷಣ ಸ್ವತಂತ್ರವಾಗಿ ಜೀವಿಸಲು ದೂರ ಹೊರಟು ಹೋಗಿ, ತಮ್ಮದೇ ಹೊಸ



ಕಬಿನಿ ಹಿನ್ನೀರಿನ ವ್ಯಾಘ್ರಿಣಿ
ಚಿತ್ರ: ರಿತೇಶ್ ಕುಮಾರ್